1595 (1885) ಶ್ರೀ ಕೃಷ್ಣಮೂರ್ತಿ ಕೆ. ಎಂ. (ಕಡೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ. ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿನ "ಕಡೂರು ಬಸ್ಸು ಡಿಪೋಗೆ" ಯಾವುದೇ ಸಾರಿಗೆ ನೀಡಿರುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ. ಡಿಪೋ ಪ್ರಾರಂಭವಾದ ನಂತರ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಹೊಸ ಮಾರ್ಗ ಮಾಡಲಾಗಿದೆ :

ಇ. ಈ ಮಾರ್ಗದಲ್ಲಿ ಎಷ್ಟು ಬಸ್ಸುಗಳು ಓಡಾಡುತ್ತಿವೆ, ಎಷ್ಟು ಮಾರ್ಗಗಳು ನಿಲುಗಡೆಯಾಗಿವೆ, ಬಸ್ಸುಗಳು ನಿಲುಗಡೆ ಆಗಿರುವುದಕ್ಕೆ ಕಾರಣವೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಇಲ್ಲ.

ಆ. 23.

ಇ. 23 ಅನುಸೂಚಿಗಳು (ಬಸ್ಸುಗಳು) ಕಾರ್ಯಾಚರಣೆಯಾಗುತ್ತಿವೆ. ಇವುಗಳ ಪೈಕಿ 7 ಅನುಸೂಚಿಗಳನ್ನು (ಬಸ್ಸುಗಳನ್ನು) ಸಾರಿಗೆಯ ಆದಾಯದ ಕೊರತೆಯಿಂದಾಗಿ ರದ್ದುಗೊಳಿಸಲಾಗಿದೆ.

1596 (1886) ಶ್ರೀ ಕೃಷ್ಣಮೂರ್ತಿ ಕೆ. ಎಂ. (ಕಡೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹೆಬ್ಬೆ ಜಲಪಾತ ಯೋಜನೆಗೆ 2005–06 ನೇ ಸಾಲಿನ ಆಯವ್ಯದಲ್ಲಿ ಎಷ್ಟು ಹಣ ನೀಡಲು ಸರ್ಕಾರ ತೀರ್ಮಾನಿಸಿದೆ ?

ಆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ತಾಂತ್ರಿಕವಾಗಿ ಒಪ್ಪಿಗೆ ನೀಡಲಾಗಿದೆಯೆ?

ಅ. ಹೆಬ್ಬೆ ಜಲಪಾತ ಯೋಜನೆಗೆ 2005–06 ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ಒದಗಿಸಿರುವುದಿಲ್ಲ.

ಆ. ತಾಂತ್ರಿಕ ಸಲಹಾ ಸಮಿತಿಯು ದಿನಾಂಕ : 2–12–2004 ರಂದು ನಡೆದ 79ನೇ ಸಭೆ ಹಾಗೂ 21–2–2005ರಂದು ನಡೆದ 80ನೇ ಸಭೆಯಲ್ಲಿ ಯೋಜನಾ ವರದಿಯನ್ನು ಪರಿಶೀಲಿಸಿದೆ. ತಾಂತ್ರಿಕ ಸಲಹಾ ಸಮಿತಿಯು ನೀಡಿರುವ ಮಾರ್ಗ ಸೂಚಿಗಳನುಸಾರ ವರದಿಯನ್ನು ಪರಿಷ್ಕರಿಸಿ ಎಂ.ಐ.ಪಿ.ಸಿ. ಬೋರ್ಡ್ ಮುಂದೆ ಮಂಡಿಸಲು ಕ್ರಮ ಜರುಗಿಸಲಾಗುತ್ತಿದೆ. ಅಂಗೀಕೃತವಾದ ವಿಧಿ ವಿಧಾನಗಳನ್ನು ಪೂರೈಸಿದ ನಂತರ ಯೋಜನೆಗೆ ಸಕ್ಷಮ ಪ್ರಾಧಿಕಾರವು ತಾಂತ್ರಿಕ ಒಪ್ಪಿಗೆ ನೀಡಬೇಕಾಗಿರುತ್ತದೆ.

1597 (2033) ಶ್ರೀ ಎಂ.ಟಿ.ಕೃಷ್ಣಪ್ಪ ಎಂಎಲ್ ಎ (ತುರುವೇಕೆರೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಗಂಗಾರಾಮ್ ಕಟ್ಟಡ ದುರಂತದಲ್ಲಿ ಸತ್ತವರ ಸಂಖ್ಯೆ ಎಷ್ಟು : (ವಿವರ ನೀಡುವುದು);

ಆ. ಈ ದುರಂತದಲ್ಲಿ ಮಡಿದ ವಾರುಸದಾರರಿಗೆಲ್ಲ ಪರಿಹಾರ ನೀಡಲಾಗಿದೆಯೇ ;

ಇ. ಇದುವರೆಗೆ ನೀಡಲಾಗಿರುವ ಪರಿಹಾರದ ಮೊತ್ತವೆಷ್ಟು (ವೃತ್ತಿವಾರು ಮತ್ತು ಮೊತ್ತವಾರು ವಿವರಗಳನ್ನು ನೀಡುವುದು) :